**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ : ಕೋಲಾರ**

**ಎಸ್.ಸಿ. ನಂ: 01/2018**

ಪ್ರಾಸಾ : 10 **(**ಚಾಸಾ : 12 **)**

ಪ್ರಮಾಣೀಕರಿಸಿದ ದಿನಾಂಕ: **04-07-2018**

ಹೆಸರು : ಡಾ.ಮಫ್ರೀದ್.ಎನ್.ದಾರವಾಡ್‌ಕರ್

ತಂದೆಯ ಹೆಸರು : ಎನ್ಎಂ. ದಾರವಾಡ್‌ಕರ್

ವಯಸ್ಸು : 33 ವರ್ಷ

ಕೆಲಸ : ವೈದ್ಯಾಧಿಕಾರಿ, ಜಾಲಪ್ಪ ಆಸ್ಪತ್ರೆ

ವಾಸ : ಜಾಲಪ್ಪ ಆಸ್ಪತ್ರೆಯ ಕ್ಯಾಂಪಸ್, ಟಮಕ

**ಮುಖ್ಯ ವಿಚಾರಣೆ:- ಮಾನ್ಯ ವಿಶೇಷ ಪಿಪಿ ರವರಿಂದ:**

ನಾನು ಕಳೆದ 2 ವರ್ಷ ಒಂದು ತಿಂಗಳಿನಿಂದ ಜಾಲಪ್ಪ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ: 03-10-2017 ರಂದು ಮದ್ಯಾಹ್ನ 3.00 ಗಂಟೆಗೆ ನೊಂದ ಬಾಲಕಿಯನ್ನು ಮುಳಬಾಗಿಲು ಗ್ರಾಮಾಂತರ ಠಾಣೆಯ ಮಹಿಳಾ ಪೇದೆಗಳಾದ 412 ಮತ್ತು 413 ಮತ್ತು ನೊಂದ ಬಾಲಕಿಯ ಪೋಷಕರು ನಮ್ಮ ಆಸ್ಪತ್ರೆಗೆ ಬಂದಿದ್ದು, ನೊಂದ ಬಾಲಕಿ ನಮ್ಮ ಮುಂದೆ ತನ್ನ ಮೇಲೆ ದಿ: 03-09-2017 ರಂದು ಪಕ್ಕದ ಮನೆಯ ಮುನಿರಾಜು ಎಂಬುವವರು ಅತ್ಯಾಚಾರ ಮಾಡಿದ್ದು, ದಿ: 02-10-2017 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ ಆಕೆಯ ಒತ್ತಾಯದಿಂದ ಇಲಿ ಪಾಷಾಣವನ್ನು ಆರೋಪಿ ಮತ್ತು ಆತನ ಕುಟುಂಬಂದವರು ಒತ್ತಾಯವಾಗಿ ಕೊಡಿಸಿದ್ದರು ಎಂದು ಹೇಳಿದ್ದು, ನಾನು ಆಕೆಯನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ. ಆಕೆಯ ಮೈ ಮೇಲೆ ಯಾವುದೇ ಹೊರಗಾಯಗಳು ಮತ್ತು ಜನನಾಂಗದಲ್ಲಿ ಸಹ ಯಾವುದೇ ಗಾಯಗಳು ಕಂಡು ಬರಲಿಲ್ಲ, ಕನ್ಯಾಪೊರೆ ಹರಿದಿದ್ದು, ಅದು ಹಳೆ ಗಾಯ ಆಗಿರಬಹುದು ಎಂದು ಅನ್ನಿಸಿತು.

ನೊಂದಬಾಲಕಿಯಿಂದ ವಜಿನಲ್ ಸ್ವ್ಯಾಬ್, ಆನೆಲ್‌ಸ್ವ್ಯಾಬ್, ಪ್ಯೂಬಿಕ್ ಹೇರ್ಸ್, ಟಾಪ್, ಡೈಪರ್ ಇವುಗಳನ್ನು ಸಂಗ್ರಹಿಸಿ FSL ಪರೀಕ್ಷೆಗಾಗಿ ಕಳುಹಿಸಿಕೊಟ್ಟೆ. ಈ ಬಗ್ಗೆ ನಾನು ಪ್ರಾಥಮಿಕ ವರದಿಯನ್ನು ಕೊಟ್ಟಿದ್ದು, ಅದರ ಪ್ರಕಾರ ಆಕೆಯ ಮೇಲೆ ಹಿಂದೆ ಅತ್ಯಾಚಾರ ಆಗಿರುವ ಸಾದ್ಯತೆಗಳು ಇರುತ್ತವೆ. ಸದರಿ ವರದಿಯನ್ನು ನಿಪಿ 7 ಮತ್ತು ಸಹಿಯನ್ನು ನಿಪಿ 7 (ಎ) ಎಂದು

ಗುರ್ತಿಸಲಾಯಿತು. ನಂತರ ನಾನು FSL ವರದಿಯನ್ನು ನೋಡಿದ್ದು, ಅದನ್ನು ನಿಪಿ 8 ಎಂದು ಗುರ್ತಿಸಲಾಯಿತು. FSL ವರದಿ ಆಧರಿಸಿ ನಾನು ಅಂತಿಮ ಅಭಿಪ್ರಾಯವನ್ನು ನೀಡಿದ್ದು, ಅದರ ಪ್ರಕಾರ ಆಕೆಯ ಮೇಲೆ ಇತ್ತೀಚೆಗೆ ಅತ್ಯಾಚಾರ ಆಗಿರುವ ಸಾಧ್ಯತೆಗಳು ಕಂಡು ಬರಲಿಲ್ಲ. ಅಂತಿಮ ಅಭಿಪ್ರಾಯವನ್ನು ನಿಪಿ 9 ಮತ್ತು ಸಹಿಯನ್ನು ನಿಪಿ 9 (ಎ) ಎಂದು ಗುರ್ತಿಸಲಾಯಿತು.

ಮು.ಮಾ 1 ಮತ್ತು 2 ಅನ್ನು ಸಾಕ್ಷಿ ಗುರ್ತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸೀಲ್ಡ್ ಕವರ್‌ನಲ್ಲಿರುವ ಪ್ಯೂಬಿಕ್‌ಹೇರ್, ವಜಿನಲ್‌ಸ್ವ್ಯಾಬ್, ಆನಲ್‌ಸ್ವ್ಯಾಬ್ ಇವುಗಳನ್ನು ಸಾಕ್ಷಿ ಗುರ್ತಿಸಿದ್ದು ಅವುಗಳನ್ನು ಮು.ಮಾಲು 14 ರಿಂದ 16 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಂಎಂಜಿ ವಕೀಲರಿಂದ ಃ-</u>**

ನೊಂದ ಬಾಲಕಿ ಕೊಟ್ಟ ಮಾಹಿತಿ ಆಧಾರದ ಮೇಲೆ ಆಕೆಯ ವಯಸ್ಸು 17, ವರ್ಷ ಎಂದು ನಮೂದಿಸಿದ್ದೇನೆ. ನಾನು ಆಕೆಯ ವಯಸ್ಸಿನ ಬಗ್ಗೆ ಯಾವೇ ಪರೀಕ್ಷೆಯನ್ನು ಮಾಡಿಲ್ಲ. ನಾನು ಪ್ಯೂಬಿಕ್ ಹೇರ್‌ನ ಉದ್ದ ಅಳತೆ ಮಾಡಿಲ್ಲ, ಕಾರಣ ಅದರ ಅವಶ್ಯಕತೆ ಇಲ್ಲ. ಕನ್ಯಾಪೊರೆ ಸೈಕ್ಲಿಂಗ್ ಮಾಡಿದರೆ ಮತ್ತು ಬೇರೆ ಕಾರಣಗಳಿಂದಲೂ ಸಹ ಹರಿಯುವ ಸಾದ್ಯತೆ ಇರುತ್ತದೆ ಎಂದರೆ ಸರಿ. ನಾನು ಪ್ರಾಥಮಿಕ ವರದಿಯಲ್ಲಿ ಹೇಳಿರುವಂತೆ ಒಂದು ತಿಂಗಳ ಹಿಂದೆ ಸಹ ಆಕೆಯ ಮೇಲೆ ಅತ್ಯಾಚಾರ ಆಗದೇ ಇರುವ ಸಾದ್ಯತೆಗಳೂ ಇರಬಹುದು. ನಾನು ನೊಂದ ಬಾಲಕಿಗೆ ಇಲಿ ಪಾಶಾಣ ಕೊಡಿಸಿದ ಬಗ್ಗೆ ಪರೀಕ್ಷೆ ಮಾಡಲಿಲ್ಲ, ಕಾರಣ ಆ ಪರೀಕ್ಷೆ ಮಾಡುವ ವಿಭಾಗದ ವೈದ್ಯರೇ ಬೇರೆ. ನಾನು ನೊಂದ ಬಾಲಕಿಯನ್ನು ಆ ಪರೀಕ್ಷೆಯ ಬಗ್ಗೆ ಕಳುಹಿಸಿಕೊಟ್ಟಿಲ್ಲ, ಆಕೆಗೆ ಮೊದಲೇ ಆ ಬಗ್ಗೆ ಚಿಕಿತ್ಸೆಯನ್ನು ನೀಡಿದ್ದರು.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

## ಎಸ್.ಸಿ. ನಂಃ 01/2018

ಪ್ರಾಸಾ ಃ 11 (ಚಾಸಾ ಃ 14 )

ಪ್ರಮಾಣೀಕರಿಸಿದ ದಿನಾಂಕಃ **04-07-2018**

| | |
|---|---|
| ಹೆಸರು | ಃ ವೆಂಕಟಶೇಷಾದ್ರಿ |
| ತಂದೆಯ ಹೆಸರು | ಃ ವೆಂಕಟರವಣಪ್ಪ |
| ವಯಸ್ಸು | ಃ 50 ವರ್ಷ |
| ಕೆಲಸ | ಃ ಅಸಿಸ್ಟೆಂಟ್ ಇಂಜಿನಿಯರ್, ಪಿಡಬ್ಲೂಡಿ ಕಚೇರಿ, ಮುಳಬಾಗಿಲು |
| ವಾಸ | ಃ ಕೋಲಾರ |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು 2 ವರೆ ವರ್ಷಗಳಿಂದ ಮುಳಬಾಗಿಲು ಪಿಡಬ್ಲೂಡಿ ಇಲಾಖೆಯಲ್ಲಿ ಸಹಾಯಕ ಇಂಜನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ 31-10-2017 ರಂದು ಸಿಪಿಐ ಮಳುಬಾಗಿಲು ರವರು ನಮ್ಮ ಕಚೆರಿಗೆ ಕೃತ್ಯ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಪತ್ರ ಬರೆದಿದ್ದು, ಅದರಂತೆ ದಿಃ 21-11-2017 ರಂದು ಮುಖ್ಯಪೇದೆ ರಮೇಶ್ ಕುಮಾರ್ ರವರು ಬಂದು ನನ್ನನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿ ನಕ್ಷೆ ತಯಾರಿಸಿಕೊಡುವಂತೆ ಸ್ಥಳ ತೋರಿಸಿದರು. ಸ್ಥಳದಲ್ಲಿ ನಾನು ಕಚ್ಚಾ ನಕ್ಷೆ ತಯಾರಿಸಿ ಕಚೇರಿಗೆ ಹೋಗಿ ಅಸಲು ನಕ್ಷೆ ತಯಾರಿಸಿ ಎಇಇ ರವರ ಮುಖಾಂತರ ಸಿಪಿಐ ರವರ ಮುಖಾಂತರ ನಕ್ಷೆಯನ್ನು ಕಳುಹಿಸಿಕೊಟ್ಟಿದ್ದು, ಸದರಿ ನಕ್ಷೆಯನ್ನು ನಿಪಿ 10 ಸಹಿಯನ್ನು ನಿಪಿ 10(ಎ) ಮತ್ತು ಪತ್ರವನ್ನು ನಿಪಿ 11 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ನಾರಾಯಣಸ್ವಾಮಿ ರವರ ಮನೆಯ ಚೆಕ್ಕುಬಂದಿಯನ್ನು ನಕ್ಷೆಯಲ್ಲಿ ತೋರಿಸಿದ್ದೇನೆ. ನಾರಾಯಣಸ್ವಾಮಿ ರವರ ಮನೆಯ ಚಕ್ಕು ಬಂದಿ ಪೂರ್ವಕ್ಕೆ ಹನುಮಂತಪ್ಪ ರವರ ಖಾಲಿ ಜಾಗ, ಪಶ್ಚಿಮಕ್ಕೆ ಹಳ್ಳಿಯ ರಸ್ತೆ, ಆ ಮನೆಯ ಪೂರ್ವಕ್ಕೆ ಬಚ್ಚಲು ಮನೆ ಮತ್ತು ಶೌಚಾಲಯ ಇರುತ್ತದೆ. ಸದರಿ ಬಚ್ಚಲು ಮನೆ ಎಷ್ಟು ವರ್ಷದ ಹಿಂದೆ ಕಟ್ಟಿದ್ದು ಎಂದು ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 12 (ಚಾಸಾ ಃ 15 )

ಪ್ರಮಾಣೀಕರಿಸಿದ ದಿನಾಂಕಃ **04-07-2018**

ಹೆಸರು ಃ ಗೇಮುಚವ್ಹಾಣ್

ತಂದೆಯ ಹೆಸರು ಃ ಡೋಂಗರು

ವಯಸ್ಸು ಃ 47 ವರ್ಷ

ಕೆಲಸ ಃ ಪಿಡಿಒ, ಹನುಮನಹಳ್ಳಿ ಗ್ರಾಮಪಂಚಾಯಿತಿ

ವಾಸ ಃ ಕೋಲಾರ

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು ಕಳೆದ 5 ವರ್ಷಗಳಿಂದ ಪಿಡಿಒ ಆಗಿ ಹನುಮನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 05-11-2017 ರಂದು ಸಿಪಿಐ ಮುಳಬಾಗಿಲು ರವರು ಆರೋಪಿ ಮುನಿರಾಜು ರವರ ವಾಸದ ಮನೆಗೆ ಸಂಬಂದಪಟ್ಟಂತೆ ದಾಖಲೆ ಕೋರಿದ್ದು, ನಾನು ದಿಃ 16-12-2017 ರಂದು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ಮಾಡಿ ನಂತರ ಕಚೇರಿ ದಾಖಲೆಗಳನ್ನು ಪರಿಶೀಲಿಸಿ ಡಿಮಾಂಡ್ ರಿಜಿಸ್ಟರ್ ನಕಲು ಮತ್ತು ಅಸೆಸ್‌ಮೆಂಟ್ ನಕಲುಗಳನ್ನು ಕೊಟ್ಟಿದ್ದು, ಅವುಗಳನ್ನು ನಿಪಿ 12 ಮತ್ತು 13 ಎಂದು ಗುರ್ತಿಸಲಾಯಿತು. ಸಹಿಗಳನ್ನು ನಿಪಿ 12 (ಎ) ಮತ್ತು ನಿಪಿ 13 (ಎ) ಎಂದು ಗುರ್ತಿಸಲಾಯಿತು. ಪತ್ರವನ್ನು ನಿಪಿ 14 ಮತ್ತು ಸಹಿಯನ್ನು ನಿಪಿ 14(ಎ) ಎಂದು ಗುರ್ತಿಸಲಾಯಿತು. ಸದರಿ ಸ್ವತ್ತು ಮುನಿರಾಜು ರವರ ಅಜ್ಜಿ ಚಿನ್ನಮ್ಮಯ್ಯ ರವರ ಹೆಸರಿನಲ್ಲಿದೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಮುನಿರಾಜು ಬಿನ್ ಶಿವಶಂಕರಪ್ಪ ರವರ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಕೋರಿದ್ದರು. ನಮ್ಮ ಪಂಚಾಯಿತಿ ಪ್ರಕಾರ ಅವರ ಹೆಸರಿನಲ್ಲಿ ಯಾವುದೇ ದಾಖಲಾತಿಗಳು ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 13 (ಚಾಸಾ ಃ 17 )

ಪ್ರಮಾಣೀಕರಿಸಿದ ದಿನಾಂಕಃ **04-07-2018**

| | |
|---|---|
| ಹೆಸರು | ಃ ವಿಶ್ವನಾಥ. ಎನ್ |
| ತಂದೆಯ ಹೆಸರು | ಃ ಲಕ್ಷ್ಮಯ್ಯ |
| ವಯಸ್ಸು | ಃ 24 ವರ್ಷ |
| ಕೆಲಸ | ಃ ಸಿಪಿ 399, ಮುಳಬಾಗಿಲು ಗ್ರಾಮಾಂತರ ಠಾಣೆ |
| ವಾಸ | ಃ ಮುಳಬಾಗಿಲು |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ಆಗಸ್ಟ್ 2017 ರಿಂದ ಮೇಲಿನ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿಃ 03-10-2017 ರಂದು ತನಿಖಾಧಿಕಾರಿಯವರು ನನ್ನನ್ನು ಮತ್ತು ಮುಖ್ಯಪೇದೆ ಹೆಚ್‌ಸಿ 102 ನಾರಾಯಣಸ್ವಾಮಿ ರವರನ್ನು ಆರೋಪಿ ಮುನಿರಾಜು ರವರನ್ನು ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿಕೊಂಡು ಬರುವಂತೆ ಕಳುಹಿಸಿಕೊಟ್ಟಿದ್ದು, ನಾವು ಪರೀಕ್ಷೆ ಮಾಡಿಸಿ ಕರೆತಂದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ. ದಿಃ 23-11-2017 ರಂದು ತನಿಖಾಧಿಕಾರಿಯವರು 16 ವಸ್ತುಗಳನ್ನು RFSL ದಾವಣಗೆರೆಗೆ ತೆಗೆದುಕೊಂಡು ಹೋಗಿ ಕೊಡುವಂತೆ ಕಳುಹಿಸಿದ್ದು, ನಾನು ಕೊಟ್ಟು ಸ್ವೀಕೃತಿಯನ್ನು ತಂದು ಹಾಜರುಪಡಿಸಿದೆ. ಸದರಿ ಸ್ವೀಕೃತಿಯನ್ನು ನಿಪಿ 15 ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ಗುರ್ತಿಸುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಆರೋಪಿಯನ್ನು ತನಿಖಾಧಿಕಾರಿಯವರು ಮನವಿ ಮುಖಾಂತರ ಕಳುಹಿಸಿಕೊಟ್ಟಿದ್ದರು. ನಾನು ಮತ್ತು ನಾರಾಯಣಸ್ವಾಮಿ ಆ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ, ನಾನು 16 ವಸ್ತುಗಳನ್ನು RFSL ದಾವಣಗೆರೆಗೆ ತೆಗೆದುಕೊಂಡು ಹೋಗಿಲ್ಲ ಮತ್ತು ಅಲ್ಲಿಂದ ಸ್ವೀಕೃತಿಯನ್ನು ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 14 (ಚಾಸಾ ಃ 16 )

ಪ್ರಮಾಣೀಕರಿಸಿದ ದಿನಾಂಕಃ **04-07-2018**

ಹೆಸರು ಃ ಸುಧಾರಾಣಿ

ತಂದೆಯ ಹೆಸರು ಃ ಮುನಿಯಪ್ಪ

ವಯಸ್ಸು ಃ 26 ವರ್ಷ

ಕೆಲಸ ಃ ಮಹಿಳಾ ಪೇದೆ 412, ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ

ವಾಸ ಃ ಮುಳಬಾಗಿಲು

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ಆಗಸ್ಟ್ 2017 ರಿಂದ ಮೇಲಿನ ಠಾಣೆಯಲ್ಲಿ ಮಹಿಳಾ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 03-10-2017 ರಂದು ನಾನು ಮತ್ತು ಮಹಿಳಾ ಪೇದೆ ಚೈತ್ರ ರವರು ಜಾಲಪ್ಪ ಆಸ್ಪತ್ರೆಗೆ ಹೋಗಿ ಅಲ್ಲಿ ಈಗಾಗಲೇ ದಾಖಲಾಗಿದ್ದ ನೊಂದ ಬಾಲಕಿಯನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿದೆವು.

ದಿಃ 06-10-2017 ರಂದು ನೊಂದ ಬಾಲಕಿಯನ್ನು ತನಿಖಾಧಿಕಾರಿಯವರ ಆದೇಶದಂತೆ ಕೋಲಾರದ ಎಸ್ಎನ್ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದೆವು. ಮಾರನೆಯ ದಿನ ರೇಡಿಯಾಲಿಜಿ ಪರೀಕ್ಷೆ ಮುಗಿಸಿದ ನಂತರ ಆಕೆಯನ್ನು ಕರೆದುಕೊಂಡು ಬಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದೆ. ಅದೇ ದಿನ ನೊಂದಬಾಲಕಿಯನ್ನು ಸಿಪಿಐ ರವರ ಆದೇಶದಂತೆ ಮುಳಬಾಗಿಲು ನ್ಯಾಯಾಲಯಕ್ಕೆ ಹೇಳಿಕೆ ದಾಖಿಸಿಕೊಳ್ಳುವಂತೆ ಹಾಜರುಪಡಿಸಿ ಕರೆತಂದೆವು. ದಿಃ 08-10-2017 ರಂದು ಜಾಲಪ್ಪ ಆಸ್ಪತ್ರೆಯಿಂದ ನೊಂದ ಬಾಲಕಿಯಿಂದ ವೈದ್ಯರು ಸಂಗ್ರಹಿಸಿ ಕೊಟ್ಟ 6 ವಸ್ತುಗಳನ್ನು ತಂದು ಸಿಪಿಐ ರವರ ಮುಂದೆ ಹಾಜರುಪಡಿಸಿ ವರದಿ ನೀಡಿದ್ದು, ಅದನ್ನು ನಿಪಿ 16 ಮತ್ತು ಸಹಿಯನ್ನು ನಿಪಿ 16(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ದಿಃ 03-10-2017 ರಂದು ನಾನು ಮತ್ತು ಚೈತ್ರ ರವರು ಜಾಲಪ್ಪ ಆಸ್ಪತ್ರೆಗೆ ಹೋಗಿಲ್ಲ ಮತ್ತು ಅಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ದಿಃ 06-10-2017 ರಂದು ನೊಂದ ಬಾಲಕಿಯನ್ನು ಎಸ್ಎನ್ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಮತ್ತು ತನಿಖಾಧಿಕಾರಿಯ ಮುಂದೆ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 07-10-2017 ರಂದು ನೊಂದ ಬಾಲಕಿಯನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ ಎಂದರೆ ಸಂರಿಯಲ್ಲ. ಅದೇ ದಿನ ನೊಂದ ಬಾಲಕಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 08-10-2017 ರಂದು ಜಾಲಪ್ಪ ಆಸ್ಪತ್ರೆಯಿಂದ ವೈದ್ಯರು ಸಂಗ್ರಹಿಸಿ ಕೊಟ್ಟ ವಸ್ತುಗಳನ್ನು ತಂದು ಸಿಪಿಐ ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.